‘ಎಲ್ಲ ಅವೇ ಇದಾವ ಸರ್. ಮಳೆ ಸುದ್ದಿ; ಬುಟ್ರೆ ಸಂಯಮ ಕಳಕೋಬಾಡ್ರಿ ಅಂಬೋ ಪ್ರೆಸ್ ನೋಟ್‌ಗಳು. ಆ ಪಕ್ಷದ ಜಿಲ್ಲಾ ಘಟಕದ ಪ್ರೆಸ್ ಮೀಟ್‌ನಲ್ಲಿ ನಿನ್ನೆ ಅವರೂ ಅದೇ ಸಬ್ಜೆಕ್ಟ್ ಇಟಕೊಂಡು ಮಾತಾಡಿದರು. ಎಲ್ಲ ಫ್ರೀ ಪ್ಲ್ಯಾಡ್ ಅನ್ನುತಾದ. ಇವತ್ತು ಮಾಲಮಾರಿಗೆ ಎಂ.ಎಲ್.ಎ ವಿಸಿಟ್ ಫಿಕ್ಸ್ ಆಗ್ಯಾದ. ಯರಲದಿನ್ನಿಗೆ ಜಿಲ್ಲಾಡಳಿತ ಊಟದ ಪ್ಯಾಕೆಟ್‌ಗಳ ವೆಹಿಕಲ್ ಕಳಿಸ್ತಾದಂತ ಇನ್‌ಫಾರ್ಮಂಟ್ ಹೇಳಿದ. ಜಗಲವಾಡಿ, ಜಟಕೂರು, ಈರಲದಿನ್ನಿ, ಮಾಕಲಚೆರುವುಗಳಲ್ಲಿ ಮನೆಗುಳು ಬಿದ್ದು ನಿನ್ನೆ ರಾತ್ರಿ ಮತ್ತೆ ನಾಲ್ಕು ಮಂದಿ ಸತ್ತಾರ. ಚೀಕೂರಿನ್ಯಾಗ ಎಂಟು ಮಂದಿ ಎರಡು ದಿವ್ಸದಿಂದ ನದೀ ದಂಡೆ ಗಿಡದ ಮ್ಯಾಲೆ ಕುಂತಗಂಡಾರ. ಮೊನ್ನೆ ಸಂಜೆ ಅಲ್ಲಿನ ಪಂಚಾಯಿತಿಯವರು ಮುಂಜಾಗರೂಕತಾ ಕ್ರಮ ಅಂತ ಎಲ್ಲರನ್ನು ಶಿಫ್ಟ್ ಮಾಡಿದಾಗ ಅವರು ಒಲ್ಲೆಂದರೆ ಒಲ್ಲೆಂದರಂತ. ಜಿಲ್ಲಾಡಳಿತ ಏಳು ಗಂಜಿ ಕೇಂದ್ರಗಳನ್ನ ಶುರು ಮಾಡ್ಯಾದ. ಆದ್ರೆ ಜಿಟಿಜಿಟಿ ಮಳೆಲಿಂದಾಗಿ ಅಡಿಗಿ ಮಾಡದೂ ಕಷ್ಟ ಆಗ್ಯಾದ. ಈ ಕಡೆ ಪಕ್ಕದ ತಾಲೂಕಿನ್ಯಾಗ ಎರಡು ದಿವಸದಲಿಂದ ಒಬ್ಬನು ದೇವರ ಗುಡಿ ಕಳಸದ ಮ್ಯಾಲೆ ಕುಂತಗಂಡೋನು ಕೆಳಗ ತುಂಬಿ ಹರ್ಯಾ ಹೊಳಿ ನೋಡಿ ಇಳ್ಯಾಕ ಒಲ್ಲೆಂತಾನಂತ. ರಕ್ಷಣೆಗೆ ಹೋದವ್ರಿಗೆ ಎಂಎಲ್‌ಎ ಸಾಬ್ರೇ ಬಂದು ನನ್ನ ಕೆಳಗಿಳಿಸಿಕ್ಯಬೇಕು ಇಲ್ಲಾಂದ್ರೆ ನಾನಿಲ್ಲೇ ಸಾಯ್ತೀನಿ ಅಂತ ಧಮಕಿ ಹಾಕ್ಯಾನಂತ’ ಎಂದು ವಿವರಿಸಿದ ತಿಮೋತಿ.

‘ಅಲ್ಲ, ನಾಗನೂರು ಶ್ರೀಮಠದ ಛತ್ತಿನ ಮ್ಯಾಲೆ ಸ್ವಾಮೀಜಿಗಳು ಮತ್ತೆ ಸೆಂಟ್ರಲ್ ಮಿನಿಸ್ಟರ್ ಇದ್ರಂತಲ್ಲ. ಅವ್ರುನ್ನ ನಮ್ಮ ಕೋಆಪರೇಟಿವ್ ಮಿನಿಸ್ಟರ್ ಹೇಮಾವತಿ ಹೆಲಿಕಾಪ್ಟರ್ ತಗಂಡ್ಹೋಗಿ ಕಾಪಾಡ್ಯಾಳಂತ. ನೋಡ್ರಿ.. ಅಲ್ಲಿ ನಿನ್ನೆ ಸಂಜೆ ಏಳು ಗಂಟೆಗೆ ನೀರಿನ ಮಟ್ಟ ಏರಕ ಶುರು ಮಾಡ್ಯಾದ. ಹತ್ತು ಗಂಟೆಗೆಲ್ಲ ಗುಡಿ ಒಳಗೆಲ್ಲ ನೀರು ತುಂಬಿಕೆಳಾಕ ಶುರುವಾಗ್ಯಾದ. ರಾತ್ರಿ ಒಂದು ಗಂಟೆ ಅಂಬಷ್ಟಿಗೆಲ್ಲ ಗ್ರೌಂಡ್ ಫ್ಲೋರ್ ತುಂಬ್ಯಾದ. ಆವಾಗ ಇವರನ್ನೆಲ್ಲ ಫಸ್ಟ್ ಫ್ಲೋರ್‍ಗೆ ಶಿಫ್ಟ್ ಮಾಡ್ಯಾರ. ನಸಿಗ್ಗೆ ನಾಲ್ಕು ಗಂಟೆಗೆ ಅದೂ ತುಂಬಿ ಸೆಕೆಂಡ್ ಫ್ಲೋರ್‍ಗೆ ಶಿಫ್ಟ್ ಮಾಡ್ಯಾರ. ಆರು ಗಂಟೆಗೆ ಅದೂ ತುಂಬಿ ಸ್ವಾಮೀಜಿ ಮತ್ತೆ ಸೆಂಟ್ರಲ್ ಮಿನಿಸ್ಟರ್‌ನ ಟೆರೇಸಿಗೆ ಶಿಫ್ಟ್ ಮಾಡ್ಯಾರ. ಮೊದಲೇ ನದೀ ದಂಡೆ ಮ್ಯಾಲಿನ ಗುಡಿ.

ಟೆರೇಸ್ ಮ್ಯಾಲೆ ನಿಂತವರ ಸುತ್ತ ನಾಕೂ ಕಡೆಗೆ ನದಿ ತುಂಬಿ ಹರಿತಿದ್ರುನೂ ಕುಡ್ಯಾಕ ಒಂದು ಹನಿ ನೀರಿದ್ದಿಲ್ಲಂತ. ಒದ್ದ್ಯಾಡಿ ಹೋಗ್ಯಾರ. ರಾತ್ರಿ ಬೆಳಗಾನ ಕಣ್ಣಿಗೆ ಕಣ್ಣು ಹಚ್ಚಿಲ್ಲಂತ. ಸುತ್ತ ಹೊಳೆ, ಮ್ಯಾಲೆ ಮಳೆ. ಹಸುವು. ಛಳಿ. ಜೀವ ಕೈಯಾಗ ಹಿಡಕೊಂಡು ಸಂಜೆ ಐದರವರೆಗೆ ಕಾಲಗಡದಾರ. ಆಮ್ಯಾಲೆ ಕೋಆಪರೇಟಿವ್ ಮಿನಿಸ್ಟರ್ ಹೆಲಿಕಾಪ್ಟರ್ ಬಂದಾದ. ಅದನ್ನ ಹೈಲೈಟ್ ಮಾಡಿ ಒಂದು ಹ್ಯೂಮನ್ ಇಂಟರೆಸ್ಟೆಡ್ ಯಾಂಗಲ್ಲಿನ ಸ್ಟೋರಿ ಮಾಡ್ರಿ. ಅದನ್ನೇ ಲೀಡ್ ತಗಳ್ರಿ’ ಎಂದರು ಸಂಪಾದಕ ವಿ.ಕೆ ಯವರು.

‘ಸರ್.. ಇದೇ ಕಷ್ಟ ಗುಡಿ ಮ್ಯಾಲೆ ಕುಂತವ್ರು, ಗಿಡದ ಮ್ಯಾಲೆ ಕುಂತವ್ರು ಗುಡ ಅನುಭವಿಸ್ಯಾರ. ಆಂಧ್ರಾ ಬಾರ್ಡರ್‍ನ್ಯಾಗ ಇದ್ದಿಲಿ ಮಾರಿಕೆಂಡು ಬದುಕುವ ಪುಲ್ಲಮ್ಮ ಅಂಬಾಕೆಯ ಆರು ಜನರ ಕುಟುಂಬ ಈ ಕ್ಷಣಕ್ಕೂ ಗಿಡದ ಮ್ಯಾಲೆ ಕುಂತಗಂಡಾದ. ಟ್ವೆಂಟಿ ಫೋರ್ ಬೈ ಸೆವೆನ್ ಚಾನೆಲ್ಲಿನವರು ಝೂಮ್ ಮಾಡಿ ಮಾಡಿ ಮುಂಜಾನಿಂದ ಅದನ್ನೇ ತೋರಸಕತ್ತ್ಯಾರ. ಅಷ್ಟೂ ಮಂದಿ ಗಿಡದ ತಪ್ಪಲ ತಿಂದು ಐದಾರ’ ಇನ್ನೇನೋ ಹೇಳುವುದರಲ್ಲಿದ್ದ ತಿಮೋತಿಯನ್ನು ಕೇಳಿಸಿಕೊಳ್ಳದೆ ಸಂಪಾದಕರು

‘ಆಮ್ಯಾಲೆ ಸಿ.ಎಂ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಮ್ಯಾಲೆ ಒಂದು ಸ್ಟೇಟ್‌ಮೆಂಟ್ ಕೊಟ್ಟಾರ. ಅದಕ್ಕ ಇಂಪಾರ್ಟೆನ್ಸ್ ಕೊಟ್ಟು ಬಾಕ್ಸ್ ಐಟೆಮ್ ಮಾಡಿ, ಫಿಲ್ ಮಾಡಿಕಳ್ರಿ’ ಎಂದು ನುಡಿದು ಏಳಲನುವಾದರು.

‘ಬಾಕ್ಸ್ ಮಾಡಂಥ ಇಂಪಾರ್ಟೆನ್ಸ್ ಏನೈತೆ ಬುಡ್ರಿ ಸರ್ ಅದರಾಗ. ಪೂನಾದ ರಾಷ್ಟ್ರೀಯ ವಿಪತ್ತು ಪರಿಹಾರ ಕಾರ್ಯಪಡೆಯ 120 ಮಂದಿ ರಕ್ಷಣಾ ತಜ್ಞರು ಮತ್ತು 32 ವಿಶೇಷ ಬೋಟ್‌ಗಳು ಬರ್ತಾವ. ಇದುವರೆಗೆ 74 ಜನರು 164 ಜಾನುವಾರುಗಳು ಸತ್ತಿರುವ ಬಗ್ಗೆ ಮಾಹಿತಿ ಐತೆ ಅಂತ ಹೇಳ್ಯಾರ. ಆ ಬೈಠಕ್ ನಡೆದ ಊರಾಗೇ ಅವರು ಅಧಿಕಾರಿಗಳ ಸಭೆ ನಡೆಸಿದ್ರು. ಬೈಠಕ್ ಬಿಟ್ಟು ತಕ್ಷಣ ಒಂದು ವೈಮಾನಿಕ ಸಮೀಕ್ಷೆ ಮಾಡಿದ್ದಿದ್ರೆ ನೆರೆಪೀಡಿತ ಜಿಲ್ಲೆಗಳ ಜಿಲ್ಲಾಡಳಿತಗಳು ಮತ್ತಿಷ್ಟು ಚುರುಕಾಗ್ತಿದ್ದವು’ ಅಂದ ಅಸಮಾಧಾನವನ್ನು ಹೊರಹಾಕುತ್ತ.

‘ನೀವೇಳದು ಕರೆಕ್ಟಾದ. ನಾನು ನಿಮ್ ವಯಸಿನ್ಯಾಗ ಹಿಂಗೇ ಆಲೋಚನೆ ಮಾಡ್ತಿದ್ದೆ. ಇರ್ಲಿ’ ಎಂದು ಸ್ವಲ್ಪ ತಡೆದು, ಮತ್ತೆ ತನ್ನದೇ ಜಾಡಿನ ಮಾತುಗಳನ್ನು ಮುಂದುವರೆಸಲು ಬೇಕಾದ ಶಕ್ತಿಯನ್ನು ಸಂಚಯಿಸಿಕೊಂಡು ‘ಆಮ್ಯಾಲೆ ಈ ಎಲ್ಲ ಕರೆ ಕೊಡುವವರಿಗೆ ಫೋನ್ ಮಾಡಿ `ಸುದ್ದಿ ಆದ್ರೆ ಒಳಗಿನ ಪೇಜುಗಳಾಗ ಅದೂ ಸಿಂಗಲ್ ಕಾಲಂ ಮಾತ್ರ ಬರುತ್ತಪ. ಒಂದು ಯಾಡ್ ಕೊಡ್ರಿ ಫೋಟೋ ಗೀಟೋ ಹಾಕಿ ಮಸ್ತನ್ಯಾಗಿ ಹಾಕ್ಕೆಳಮು, ನಾಕು ಮಂದಿ ನೋಡ್ತಾರ ಅಂತ ಕನ್ವಿನ್ಸ್ ಮಾಡ್ರಿ. ದುಡ್ಡು ನಿಧಾನಕ್ಕೆ ಕೊಡ್ರಿ ಬೇಕಾರೆ ಅಂತನೂ ಹೇಳ್ರಿ. ಅವೆಲ್ಲಿಗಿ ಹೋಗದಿಲ್ಲ’ ಎನ್ನುತ್ತ ಇದೇ ಇನ್ನು ಕಡೆ ಮಾತೆಂಬಂತೆ ಎದ್ದು ನಿಂತರು.

ತಿಮೋತಿಗೆ ಪಿಚ್ಚೆನಿಸಿತು. ತನ್ನ ಬಗ್ಗೆ ತಾನೇ ಅಸಹ್ಯಿಸಿಕೊಂಡ. ಮತ್ತೊಬ್ಬ ಸಬ್ ಎಡಿಟರ್ ವೆಂಕಟೇಶ ಒಳಬಂದು ತಿಮೋತಿಗೆ ಫೋನಿರುವುದಾಗಿ ಹೇಳಿದಾಗ `ಸದ್ಯ ಪಾರಾದೆ’ ಎಂದುಕೊಂಡು ಹೊರಬಂದು ರಿಸೀವರ್ ಎತ್ತಿಕೊಂಡ. ‘ಹೇಳ್ರಿ ಅಬ್ದುಲ್, ಏನ್ ಸುದ್ದಿ?’ ಎಂದ ತಿಮೋತಿ.

4

‘ನಂದು..’

‘ಏನ್ರಿ?’ ಕೇಳಿದಳು ತಿಮೋತಿಯ ಹೆಂಡತಿ.

‘ನಾನೊಂದು ವಾರ ಆಫೀಸಿಗೆ ರಜೆ ಹಾಕೀನೆ’

‘ಹಾಕ್ರಿ ಅದರಾಗೇನು?’

‘ಅಬ್ದುಲ್ ಫೋನ್ ಮಾಡಿದ್ರು’

‘ಏನಂತ?’

‘ಮಳೆ ಸಂತ್ರಸ್ಥ ಹಳ್ಳಿಗುಳಾಗ ಅವರ ಎನ್‌ಜಿಓ ಕಡೆಲಿಂದ ಪರಿಹಾರ ಕಾರ್ಯ ಮಾಡ್ತಾರಂತ. ನಾನೂ ಆ ಟೀಮಿನ್ಯಾಗ ಸೇರಿಕ್ಯಬೇಕಂತ ಮಾಡೀನಿ’

‘ಅಲ್ರೀ ಇಂಥ ಮಳೆ ಬಂದಾಗ ನಿಮಗ ಒಂದ್ವಾರ ಲೀವ್ ಯಾರ್ ಕೊಡ್ತಾರ್ರಿ? ಖರೆವು ಹೇಳ್ರಿ, ಏನ್ ನಡದಾದ? ಜಗಳ ಗಿಗಳ ಆಡಿ ರಿಜೈನ್ ಮಾಡಿ ಬಂದ್ರೆನಪ ಮತ್ತೆ?’

‘ಏನಿಲ್ಲೆ.. ಮಿಟ್ಟೆ ಮ್ಯಾಲಿದ್ದವರ ಕನಿಕರದ ಬಗ್ಗೆ ಬರಕಂತ ಕುಂದ್ರದು ನನಗ ಅಷ್ಟೇನೂ ಸರಿ ಅನಸವಲ್ದು’

‘ನಿಮ್ದು ಇದು ಯಾವತ್ತಿನ ಕಥೆ ಆಯ್ತು. ಎಡಿಟರ್ ಒಪ್ಪಬೇಕಲ್ರಿ?’

‘ಅದೇ ಎಡಿಟರ್ ಜತೆ ಮಾತಾಡೀನಿ. ಮನಸಿಲ್ಲದ ಮನಸು ಒಪಿಗೆಂಡಾರ. ಸಂಜೆಗೆ ಹಳ್ಳಿಗಳಿಂದ ಬಂದ್ಮ್ಯಾಗ ಪ್ರೂಫು, ಪೇಜಿನೇಷನ್ ಕೆಲಸ ನಾನು ಮಾಡ್ತೀನಿ ಅಂತ ಹೇಳೀನಿ’

‘ಹೋಗಿ ಬರ್ರಿ. ಆದ್ರೆ ಯಾರ ಗುಡ ಡಿಫರೆನ್ಸ್ ಮಾಡಿಕೆಬ್ಯಾಡ್ರಿ. ಎಷ್ಟ್ ಸತಿ ಹೇಳೀನಿ ನಿಮಗ’

‘ಆಯ್ತು ಬಿಡೇ. ನೀನು ಅದನ್ನ ಹೇಳ್ತಲೇ ಅದೀಯ. ನಾನು ಮತ್ತೆ ಅದನ್ನೇ ಮಾಡ್ತಲೇ ಇದೀನಿ. ತೊಟ್ಲ ತೂಗಿ ತೂಗಿ ತಾನೇ ನಿಂದ್ರತ್ತ, ಬಡದಾಡಿ ನಿಂದ್ರಸಕೋಗಿ ತ್ರಾಸ ಮಾಡಿಕೆಬ್ಯಾಡ ನೀನು. ಸರಿ ಬಿಡು ಕಂಟ್ರೋಲ್ ಮಾಡಿಕೆಂತೀನೆಪ ಆಯ್ತಾ?’

‘ಆಯ್ತುರಿ. ರೀ ಏನ್ರಿ ಅದು? ನಿನ್ನೆ ಸ್ವಾಮಿಗಳು ಹೆಲಿಕಾಪ್ಟರಿನ್ಯಾಗ ನಮ್ ಬಿಸ್ಲೂರ ಮಠಕ್ಕೇ ಬಂದಾರಂತ ಹೌದಾ?’

‘ಎಲ್ಲ ರಾಜಕೀಯ. ಸಾವಿರ ಮಂದಿ ಅಮಾಯಕರನ್ನು ಉಳಸಕಿಂತ ಒಬ್ಬ ಸ್ವಾಮೀಜಿನ್ನ ಉಳಿಸಿಬಿಟ್ರೆ ಸರ್ಕಾರ ಹೌದ್ ಆಗಿಬಿಡ್ತಾದ. ಅದು ಬುಟ್ಟು ಬ್ಯಾರೆ ಏನು ಮಾಡ್ಯಾರೇಳು? ಇವತ್ತು ಸಂಜಿಕಿ ಸಿಎಂಗೆ ಕ್ಷೀರಬಂಧು ಅಂತ ಬಿರುದು ನೀಡಕತ್ತ್ಯಾರ. ಕ್ಯೂ ಟೀವ್ಯಾಗ ಲೈವ್ ಐತಿ ನೋಡು ಬೇಕಾದ್ರೆ, ಬಿಸ್ಲೂರಿಗೆ ಬರಾದು ಬುಟ್ಟು ಬಿರುದು ತಗಂಬಾಕ ಹೋಗಿರ ನಮ್ ಸಿಎಂನ’

‘ಏ ಇರ್ಲಿ ಬುಡ್ರಿ. ಬರ್ತಾರ. ಅವರ ಟೈಮ್ ಅವರು ಹೊಂದಿಸಿಗೆಂಡು ಬರಾತನಕ ಪುರಸತಿಗಿ ಇರ್ಲಿಕ್ರ ಹೆಂಗ’ ಅಂದವಳೇ ಮೆಲುದನಿಯಲ್ಲಿ ‘ನಾಳೆ ಗುರುವಾರ ಆದ. ಸ್ವಲ್ಪ ಸಂಜೀಕಿ ಜಲ್ದಿ ಬರ್ತೀರ್ಯಾ? ಗುಡಿಗಿ ಹೋಗಿ ಬರಮು. ಹಂಗೇ ಸ್ವಾಮಿಗಳ ದರ್ಶನ ತಗೊಂಬರಮು’ ಎಂದಳು.

ಮೀಸಲಾತಿಗಾಗಿ ಹುಟ್ಟಿನ ಮೂಲದ ದಲಿತತ್ವ, ಆಚರಣೆ ಹಾಗೂ ಸಾಮಾಜಿಕ ಅಸ್ಮಿತೆಗೆ ಕ್ರೈಸ್ತ ತತ್ವ, ಪತ್ನಿಪ್ರೀತ್ಯರ್ಥವಾಗಿ ವರ್ಣಾಶ್ರಮ ಪೋಷಿಸುವ ವೈದಿಕ ಮಠದ ಅನುಸರಣತ್ವ ಮಾಡುವ ತನ್ನ ಬಗೆಗೇ ತಿಮೋತಿಗೆ ಒಂದು ನಮೂನಿ ಅನ್ನಿಸಿ ಒಂದು ನಿಡಿದಾದ ಉಸಿರು ಬಿಟ್ಟು ಸರಿಯೆಂಬಂತೆ ತಲೆಯಾಡಿಸಿದ. ಪ್ರಹ್ಲಾದ ಹೇಳುವುದು ನಿಜವೇ ‘ಪತ್ನಿ ಪ್ರೀತ್ಯರ್ಥಂ ಇದಂ ಶರೀರಂ’.

**(ಸಶೇಷ)**